ತಂದು ಬಿಡುತ್ತೇನೆ. ನಂತರ ನಿಮಗೆ ಇಷ್ಟ ಬಂದ ಸ್ಥಳಗಳಿಗೆ ಹೋಗಬಹುದು, ಓಕೆ?'

ಅವರು ತಲೆಯಾಡಿಸಿದರು. ಕರೀನಾ ಮತ್ತು ಜೋಹಾನ ನೀನಾಳ ಪುತ್ರಿಯರಾಗಿದ್ದು ಅವರ ಮೈಬಣ್ಣದಿಂದ ಅವರು ಮಿಶ್ರ ತಳಿಯವರೆಂದು ತೋರುತ್ತಿತ್ತು. ಅವರ ವ್ಯಕ್ತಿತ್ವದಲ್ಲಿ ಒಂದು ಗಾಢ ಸ್ಕಾಂಡಿನೇವಿಯನ್ ಛವಿಯಿತ್ತು.

'ನಿಮ್ಮ ಪುತ್ರಿಯರ ತಂದೆ ಬಹುಶಃ ಡ್ಯಾನಿಶ್‌ನವರಿರಬೇಕು?' ಕೇಳಿದೆ.

'ಆದರೆ ನಾವು ಬೇರೆಯಾಗಿದ್ದೇವೆ' ನೀನಾ ಹೌದೆಂದು ತಲೆಯಾಡಿಸುತ್ತಾ ನಿರಾಸೆಯಿಂದ ಹೇಳಿದಳು, 'ನೌ ಐ ಯಾಮ್ ಎ ಸಿಂಗಲ್ ಮದರ್.'

ಈಗ ನಾನೂ ಒಂಟಿಯಾಗಿದ್ದೆ. ಸೌಂದ್ರಾಳೊಂದಿಗೆ ವಿಚ್ಛೇದನವಾಗಿ ಎಂಟು ವರ್ಷಗಳಾಗಿವೆ.

ನೀನಾ ತನ್ನ ಪತಿಯಿಂದ 'ಸೆಪರೇಟೆಡ್' ಮತ್ತು 'ಸಿಂಗಲ್' ಆಗಿದ್ದಾಳೆಂಬ ವಿಷಯವನ್ನು ಕೇಳಿ ನನಗೆ ಸಂತಸವಾಯಿತು, 'ನಾನೂ ಒಂಟಿ.'

'ಓಹೋ!' ಅವಳು ಈ ಸಂಯೋಗಕ್ಕೆ ಆಶ್ಚರ್ಯವನ್ನು ವ್ಯಕ್ತಪಡಿಸಿದಳು. ಆದರೆ ಅವಳು ಮನಸ್ಸಿನಲ್ಲಿ ಸಂತಸಪಟ್ಟಳು.

ನಾನು ಅವಳಿಗೆ ಮಾಹಿತಿ ನೀಡಿದೆ, 'ನನಗೂ ಲೂಸಿ ಮತ್ತು ಗ್ರೇಸಿ ಎಂದು ಇಬ್ಬರು ಪುತ್ರಿಯರಿದ್ದಾರೆ. ಅವಳಿ ಜವಳಿ ಮಕ್ಕಳು.'

'ಸಿಮಿಲರ್ ಟ್ವಿನ್ಸ್?'

'ಇಲ್ಲ, ಎರಡು ಭಿನ್ನ ಗರ್ಭಕೋಶದ ಅವಳಿ ಮಕ್ಕಳು, ಇಬ್ಬರಲ್ಲೂ ಹೋಲಿಕೆಯಿಲ್ಲ. ಒಬ್ಬಳ ತಲೆಕೂದಲು ಕಪ್ಪಾಗಿದ್ದರೆ, ಇನ್ನೊಬ್ಬಳದ್ದು ಸುವರ್ಣ ವರ್ಣ. ಒಬ್ಬಳು ತುಂಬಾ ಬಿಳಿ, ಇನ್ನೊಬ್ಬಳು ಗೋಧಿ ಬಣ್ಣದವಳು. ಒಬ್ಬಳ ಕಣ್ಣುಗಳು ನೀಲಿ, ಇನ್ನೊಬ್ಬಳದ್ದು ಕಂದು ಬಣ್ಣ.'

'ಅವಳಿಯಾದರೂ ಇಬ್ಬರಲ್ಲಿ ಇಷ್ಟೊಂದು ವ್ಯತ್ಯಾಸ!' ನೀನಾ ಆಶ್ಚರ್ಯವನ್ನು ವ್ಯಕ್ತಪಡಿಸಿದಳು.

'ಹೌದು. ಜೀನೋಮ್ ಮತ್ತು ಕ್ರೋಮೋಸೋಮ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬುದು ನಮಗಿನ್ನೂ ತಿಳಿದು ಬಂದಿಲ್ಲ' ಎಂದೆ.

ನಮ್ಮಿಬ್ಬರ ಪರಿಸ್ಥಿತಿಗಳು ಒಂದೇ ತೆರನಾಗಿದ್ದವು. ನನಗೆ ಭಾರತ ಸದಾ ಆಕರ್ಷಣೀಯ ದೇಶವಾಗಿದೆ. ಎರಡು ಮೂರು ಬಾರಿಯ ಭೇಟಿಯ ನಂತರ ನನ್ನನ್ನು ವಿಚಿತ್ರ ಸೆಳೆತವೊಂದು ಕಟ್ಟಿ ಹಾಕಿದೆ. ಅವಳು ಸಹ ನನ್ನ ಬಗ್ಗೆ ಸಾಕಷ್ಟು ಕುತೂಹಲವನ್ನು ತೋರಿದಳು. ನಾನು ನೀನಾಳೊಂದಿಗೆ ಹೆಚ್ಚೆಚ್ಚು ಸಮಯವನ್ನು ಕಳೆಯಲಾರಂಭಿಸಿದೆ. ಸಾಮಾನ್ಯವಾಗಿ ಅವಳ ಹೊಟೇಲ್‌ಗೆ ಹೋಗುತ್ತಿದ್ದೆ. ಅವಳು ಆರು ದಿನಗಳು ಎಡಿನ್‌ಬರ್ಗ್‌ನಲ್ಲಿ ತಂಗಿದ್ದಳು, ಈ ನಡುವೆ ಅದೆಷ್ಟೋ ಬಾರಿ ಅವಳನ್ನು ಭೇಟಿಯಾದೆ. ಅವಳೊಂದಿಗೆ ರೆಸ್ಟೋರೆಂಟಿನಲ್ಲಿ ಊಟ ಮಾಡಲು ಹೋಗುತ್ತಿದ್ದೆ, ಅವಳು ಮತ್ತು ಅವಳ ಪುತ್ರಿಯರೊಂದಿಗೆ ಅಡ್ಡಾಡುತ್ತಿದ್ದೆ. ಎಡಿನ್‌ಬರ್ಗ್ ಟೂರ್ ಮುಗಿದ ನಂತರ, ಅವಳು ತನ್ನ ಪುತ್ರಿಯರೊಂದಿಗೆ ಕೋಪನಹೇಗನ್‌ಗೆ ಮರಳಿ ಹೋಗುವಾಗ, ಅವರನ್ನು ಏರ್‌ಪೋರ್ಟಿಗೆ ಬಿಡಲು

## ಕಳೆದ ಸಂಚಿಕೆಯಲ್ಲಿ



ಏಪ್ರಿಲ್ ತಿಂಗಳ ಒಂದು ಶನಿವಾರ ಬೆಳಗ್ಗೆ ಒಳ್ಳೆಯ ಲಹರಿಯಲ್ಲಿದ್ದ ಪಾಲ್‌ಗೆ ದೂರವಾಣಿ ಕರೆಯೊಂದು ಫೋನ್ ಬಂತು. ನೀನಾಳ ತಾಯಿ ಶೀಲಾ ದೇವಿ ಕರೆ ಮಾಡಿದ್ದರು. ನೀನಾಳ ವಾರ್ಷಿಕ ಶ್ರಾದ್ಧದ ದಿನದಂದು ಹಮ್ಮಿಕೊಂಡಿರುವ ಧಾರ್ಮಿಕ ಆಚರಣೆಗೆ ಆಹ್ವಾನ ನೀಡಿದರು. ಸಂಗಾತಿ ತೀರಿಕೊಂಡು ವರ್ಷವಾದುದನ್ನು ನೆನಪಿಸಿಕೊಂಡು ಪಾಲ್ ಭಾವುಕನಾದ. ತನ್ನ ಬದುಕಿನ ಭಾಗವಾಗಿದ್ದ ನೀನಾಳ ನೆನಪಿನ ಕಾರ್ಯಕ್ರಮಕ್ಕೆ ಪಾದಯಾತ್ರೆಯಲ್ಲಿ ಹೋಗಿಬರಲು ನಿರ್ಧರಿಸಿದ. ತನ್ನ ವಾಸಸ್ಥಳದಿಂದ ಧಾರ್ಮಿಕ ಕಾರ್ಯಕ್ರಮ ನಡೆಯುವ ದೇವಸ್ಥಾನದ ಸ್ಥಳಕ್ಕೆ 108 ಕಿ.ಮೀ. ದೂರವಿತ್ತು. ಅಷ್ಟೂ ದೂರವನ್ನು ಪಾದಯಾತ್ರೆಯಲ್ಲಿ ಕ್ರಮಿಸಲು ಪಾಲ್ ನಿರ್ಧರಿಸಿದ. ಈ ವಯಸ್ಸಿನಲ್ಲಿ ಅಷ್ಟೊಂದು ದೂರ ನಡೆಯುವುದು ಒಳ್ಳೆಯದಲ್ಲವೆಂದು ಮಗಳು ಲೂಸಿ ಹೇಳಿದಳು. ಆದರೆ, ಪಾಲ್ ನಿರ್ಧಾರ ಅಚಲವಾಗಿತ್ತು. ಪ್ರೇಮದ ನೆನಪುಗಳ ದಾರಿಯಲ್ಲಿ ಒಂಟಿಯಾಗಿ ನಡೆಯಲು ಪಾಲ್ ಆರಂಭಿಸಿದ. ಆ ದಾರಿಯಲ್ಲಿ ನೀನಾಳ ನೆನಪುಗಳು ಮೂಡತೊಡಗಿದ್ದವು.

ಹೋದೆ. ನಾವಿಬ್ಬರು ಪರಸ್ಪರರ ಮೊಬೈಲ್ ನಂಬರ್ ಮತ್ತು ಇಮೇಲ್ ವಿಳಾಸವನ್ನು ನಮೂದಿಸಿಕೊಂಡೆವು. ನಾವು ಫೇಸ್‌ಬುಕ್ ಮತ್ತು ಲಿಂಕ್‌ಡೆನ್ ಫ್ರೆಂಡ್ ಆದೆವು. ಪರಸ್ಪರ ಸಂಪರ್ಕದಲ್ಲಿರುವ ಬಗ್ಗೆ ಮಾತು ಕೊಟ್ಟೆವು. ಕೋಪನಹೇಗನ್ ತಲುಪುತ್ತಲೇ ನೀನಾ 'ಥ್ಯಾಂಕ್ಯೂ' ಸಂದೇಶ ಕಳುಹಿಸಿದಳು, ಅದಕ್ಕೆ ನಾನು ತಕ್ಷಣ ಉತ್ತರಿಸಿದೆ.

ನನಗೆ ಬಿಡುವು ಸಿಕ್ಕಾಗ ನನ್ನ ಸ್ಮಾರ್ಟ್‌ಫೋನ್‌ನಲ್ಲಿ ಫೇಸ್‌ಬುಕ್ ತೆರೆದು ನೀನಾಳಿಗೆ 'ಹಾಯ್', ಹಲೋ' ಎಂದು ಹೇಳುತ್ತಿದ್ದೆ, ಅವಳ ಕ್ಷೇಮ ಸಮಾಚಾರಗಳನ್ನು ವಿಚಾರಿಸುತ್ತಿದ್ದೆ. ಅವಳು ಆನ್‌ಲೈನಿನಲ್ಲಿದ್ದರೆ ಒಂದೆರಡು ಮಾತನಾಡುತ್ತಿದ್ದೆ, ಇಲ್ಲದಿದ್ದಲ್ಲಿ ಚಾಟ್ ಬಾಕ್ಸ್‌ನಲ್ಲಿ ಅವಳಿಗೆ ಮೆಸೇಜ್ ಹಾಕುತ್ತಿದ್ದೆ. ವೀಕೆಂಡ್‌ನ ಬಿಡುವಿನಲ್ಲಿ ಸಾಕಷ್ಟು ಹರಟುತ್ತಿದ್ದೆವು, ಒಬ್ಬರು ಮತ್ತೊಬ್ಬರ ಮೆಸೇಜ್ ನೋಡಿ ನಮ್ಮ ನಮ್ಮ ಚಟುವಟಿಕೆಗಳ ಬಗ್ಗೆ ತಿಳಿಯುತ್ತಿದ್ದೆವು. ನಾವು ಜಗತ್ತಿನ ಬಗ್ಗೆ ಮಾತನಾಡುತ್ತಿದ್ದೆವು, ಪರಿವಾರದ ಬಗ್ಗೆ ಮಾತನಾಡುತ್ತಿದ್ದೆವು; ಕಡೆಗೆ ನಮ್ಮ ವಿಷಯವನ್ನೇ ಹೇಳಿಕೊಳ್ಳುತ್ತಿದ್ದೆವು. ಕ್ರಮೇಣ ಪ್ರತಿಯೊಂದು ವಿಷಯವನ್ನೂ ಶೇರ್ ಮಾಡಿಕೊಳ್ಳಲಾರಂಭಿಸಿದ್ದೆವು.

'ನೀನಾ, ಈ ವಾರ ಲೂಸಿ ಮತ್ತು ಗ್ರೇಸಿ ನನ್ನ ಮನೆಗೆ ಬರ್ತಿದ್ದಾರೆ, ಎರಡು ವಾರ ಇರ್ತಾರೆ...'

'ಅವರಿಗೆ ಯಾವ ಯಾವ ಪ್ರೋಗ್ರಾಂ ಹಾಕಿದ್ದೀರ?' ಹೀಗೆಂದು ವಿಚಾರಿಸಿ ನನಗೆ ಸಲಹೆಗಳನ್ನು ಕೊಡುತ್ತಿದ್ದಳು. ನಾವೀಗ ಪರಸ್ಪರರ ಜೀವನದ ಒಂದು ಅನಿವಾರ್ಯ ಅಂಗವಾಗುತ್ತಿದ್ದೆವು. ಅದೊಂದು ದಿನ ದೀರ್ಘ ಮಾತುಕತೆಯ ನಂತರ ಅವಳಿಗೆ ಹೇಳಿದೆ, 'ನೀನಾ, ನಾನು ನಿನಗೊಂದು ವಿಷಯ ಹೇಳಬೇಕೆಂದು ಬಯಸಿದ್ದೇನೆ.'

'ಏನು?' ನೀನಾ ಸಹಜವಾಗಿ ಕೇಳಿದಳು.

'ನನಗನ್ನಿಸಿದಂತೆ ನಾವಿಬ್ಬರು ಉತ್ತಮ ಸ್ನೇಹಿತರು ಮಾತ್ರವಲ್ಲ, ಅದಕ್ಕಿಂತ ಮುಂದಕ್ಕೆ ಹೋಗಿದ್ದೇವೆ. ನಮ್ಮ ನಡುವೆ ಎಂಥ ಸಂಬಂಧವುಂಟಾಗಿದೆ ಎಂದರೆ... ಅದನ್ನು...'

'ಪ್ರೀತಿ ಅಂತಾರೆ' ನೀನಾ ನಗುತ್ತಾ ನನ್ನ ವಾಕ್ಯವನ್ನು ಪೂರ್ಣಗೊಳಿಸಿದಳು.

'ಯೆಸ್. ಐ ಲವ್ ಯೂ, ನೀನಾ!'

'ಐ ಟೂ ಲವ್ ಯೂ, ಪಾಲ್!'

ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಎದುರಿಗಿದ್ದ ಬೋರ್ಡ್ ಓದಿದೆ – ಹರಲೇವ್ ಬಂದಿತ್ತು. ನೀನಾಳ ತಂದೆ–ತಾಯಿ ಹರಲೇವ್‌ನಲ್ಲಿರುತ್ತಾರೆ. ನೀನಾಳ ಸಾವಿನ ನಂತರ, ನಾನಿಲ್ಲಿಗೆ ಮೊದಲ ಬಾರಿಗೆ ಬಂದಿದ್ದೇನೆ. ನಾನು ಅವಳ ತಂದೆ–ತಾಯಿಯ ಮನೆಯ ಎದುರಿನಿಂದ ಹಾದು ಹೋಗುವಾಗ ನನ್ನ ಹೃದಯ ತುಂಬಿ ಬಂತು. ನೀನಾ ಮೊದಲ ಬಾರಿಗೆ ನನ್ನನ್ನು ತನ್ನ ತಂದೆ–ತಾಯಿಗೆ ಪರಿಚಯಿಸಲು ಕರೆದೊಯ್ದ ಆ ಸಂಜೆ ನೆನಪಾಯಿತು; ಅವಳ ತಂದೆ ನನ್ನೊಂದಿಗೆ ಥರ್ಡ್ ಡಿಗ್ರಿ ಸಂದರ್ಶನ ಮಾಡಿದ್ದರು!

ನಾನು ಒಂದು ಕ್ಷಣ ಅವರ ಮನೆ ಎದುರು ನಿಂತು, ಅವರನ್ನು ಭೇಟಿಯಾಗುತ್ತೇನೆ, ಚಹಾ ಕುಡಿಯುತ್ತೇನೆ ಎಂದು ಯೋಚಿಸಿದೆ. ಆದರೆ ನಂತರ ಮಾರ್ಗದಲ್ಲಿ ಯಾರ ಮನೆಯಲ್ಲೂ ವಿಶ್ರಾಂತಿಯನ್ನು ಪಡೆಯುವುದಿಲ್ಲ, ನಾಳೆ ನಾನು ಶ್ರೀನಿವಾಸನ್ ದಂಪತಿಗಳನ್ನು ದೇವಸ್ಥಾನದಲ್ಲಿ ಭೇಟಿಯಾಗುತ್ತಿದ್ದೇನೆ ಎಂದು ಯೋಚಿಸಿ ಮುಂದುವರೆದು ಹೋದೆ.

ನಾನು ಇದ್ದಕ್ಕಿದ್ದಂತೆ ಸಂತಸದಿಂದ ಬೀಗಿದೆ.